## 2. ಇಂಡಿಯಾ ಗ್ಲೋಬಲ್ ವೀಕ್ – 2020 ವರ್ಚುವಲ್ ಶೃಂಗದಲ್ಲಿ ಪ್ರಧಾನಿ ಭಾಷಣ, ಹೂಡಿಕೆದಾರರಿಗೆ ಮುಕ್ತ ಆಹ್ವಾನ

ಭಾರತ ಹಲವು ಸವಾಲುಗಳನ್ನು ಮೆಟ್ಟಿನಿಂತಿದೆ. ಕೊರೋನಾ ಸಂಕಷ್ಟವನ್ನೂ ಸಮರ್ಥವಾಗಿ ಎದುರಿಸುವುದರ ಜೊತೆಗೆ ಜಾಗತಿಕ ಆರ್ಥಿಕತೆ ಪುನಶ್ಚೇತನದಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಜಾಗತಿಕವಾಗಿ ಮುಕ್ತ ಆರ್ಥಿಕತೆ ಹೊಂದಿರುವ ದೇಶಗಳಲ್ಲಿ ಭಾರತ ಮುಂಚೂಣಿಯಲ್ಲಿದೆ. ಹೀಗಾಗಿ ಭಾರತ ಹೂಡಿಕೆಗೆ ಪ್ರಶಸ್ತ ಸ್ಥಳ ಎಂದು ಪ್ರಧಾನಿ ಹೂಡಿಕೆದಾರರಿಗೆ ಆಹ್ವಾನ ನೀಡಿದರು. ಬ್ರಿಟನ್‌ನಲ್ಲಿ ಆರಂಭವಾದ ಇಂಡಿಯಾ ಗ್ಲೋಬಲ್ ವೀಕ್–2020 ವರ್ಚುವಲ್ ಶೃಂಗಸಭೆಯ ಉದ್ಘಾಟನಾ ಭಾಷಣ ಮಾಡಿದ ಪ್ರಧಾನಿ ಭಾರತವು ಪ್ರತಿಭೆಯ ಆಗರವಾಗಿರುವುದರಿಂದ ಯಾವುದೇ ಸವಾಲನ್ನು ಎದುರಿಸುವ ಸಂಪನ್ಮೂಲ ಹೊಂದಿದೆ.

ಭಾರತದ ತಂತ್ರಜ್ಞಾನದ ಉದ್ದಿಮೆ ಮತ್ತು ತಂತ್ರಜ್ಞರು ದಶಕಗಳಿಂದ ತಮ್ಮ ಸಾಮರ್ಥ್ಯವನ್ನು ವಿಶ್ವಮಟ್ಟದಲ್ಲಿ ತೋರುತ್ತಿದ್ದಾರೆ. ಇವರನ್ನು ಯಾರೂ ಉಪೇಕ್ಷಿಸಲಾಗದು. ನಮ್ಮ ದೇಶದ ತಂತ್ರಜ್ಞರು ಜಾಗತಿಕವಾಗಿ ಕೊಡುಗೆ ನೀಡಲು ಉತ್ಸುಕರಾಗಿದ್ದಾರೆ. ಭಾರತೀಯರು ಸ್ವಾಭಾವಿಕವಾಗಿ ಸುಧಾರಣಾವಾದಿಗಳು, ಭಾರತ ಸಾಮಾಜಿಕ ಅಥವಾ ಆರ್ಥಿಕ ಸವಾಲುಗಳನ್ನು ಎದುರಿಸಿ ಬಲಿಷ್ಠವಾಗಿದೆ. ಈಗ ಒಂದು ಕಡೆ ಕೋವಿಡ್–19 ಸಾಂಕ್ರಾಮಿಕದ ವಿರುದ್ಧ ಹೋರಾಡುವುದರ ಜೊತೆಗೆ ಜನರ ಆರೋಗ್ಯದ ಬಗ್ಗೆಯೂ ಸರ್ಕಾರ ಕಾಳಜಿ ವಹಿಸಿದೆ. ಇದೇ ವೇಳೆಗೆ ಆರ್ಥಿಕತೆಯನ್ನು ಸಬಲಗೊಳಿಸುವ ಪ್ರಯತ್ನ ಚುರುಕಾಗಿ ಮುಂದುವರಿಸಿದೆ. ಅಸಾಧ್ಯವಾದುದ್ದನ್ನು ಸಾಧಿಸುವ ಛಲ ಭಾರತೀಯರಿಗೆ ಇದೆ. ಆದ್ದರಿಂದಲೇ ಆರ್ಥಿಕ ಪ್ರಗತಿಯ ಹಾದಿಯಲ್ಲಿ ನಾವು ಹಸಿರು ಚಿಗುರನ್ನು ಕಾಣಲು ಆರಂಭಿಸಿದ್ದೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:10.07.2020